ಓ.ಎಸ್‌ಃ 21/2019

ಪಿ.ಡಬ್ಲೂಃ 03

**<u>ದಿನಾಂಕಃ 21-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು</u>**

**<u>ಪಾಟೀ ಸವಾಲು 1 ಮತ್ತು 5 ನೇ ಪ್ರತಿವಾದಿಗಳ ಪರ ಶ್ರೀ. ಪಿ.ಎಂ.ವಿ. ವಕೀಲರಿಂದಃ</u>**

1. ದಾವಾ ಆಸ್ತಿಯ ಪೂರ್ವಕ್ಕೆ ವೀನುಗಾರಿಕೆ ಸಹಕಾರಿ ಸಂಘದ ಕಟ್ಟಡ ಇರುತ್ತದೆ. ನಿಪಿ-2 ರ ಪ್ರಕಾರ ಪೂರ್ವಕ್ಕೆ ಮುಂದಿನ ಬೆಳೆವಣಿಗೆ ಉಳಿದ ಜಾಗ ಇರುತ್ತದೆ ಎಂದರೆ ಸಾಕ್ಷಿಯು ಕಟ್ಟಡ ಇರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಹಣಮಂತ ದೇವಸ್ಥಾನ. ದಾವಾ ಸಲ್ಲಿಸುವಾಗ ಖುಲ್ಲಾ ಜಾಗ ಇರುತ್ತದೆ ಎಂದು ಬರೆಸಿರುತ್ತಾರೆ ಎಂದರೆ ಸರಿ. ರುದ್ರಪಶುಪತಿ ದೇವಸ್ಥಾನ ಮಠ ಯಾವಗಿನಿಂದ ಇರುತ್ತದೆ ಎಂದರೆ ಸಾಕ್ಷಿಯು 12 ಶತಮಾನದಿಂದ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ದಾಖಲಾತಿಯನ್ನು ಹಾಜರಪಡಿಸಲಾಗಿರುತ್ತದೆ.

2. ರುದ್ರಪಶುಪತಿ ಮಠದಲಿಲ ಗದ್ದುಗೆ ರುದ್ರಪಶುಪತಿ ಮಹರಾಜ ರವರ ಗದ್ದುಗೆ ಇರುತ್ತದೆ. ಮುಳಗಡೆ ಆದ ಹಣ ಬಂದು ಬ್ಯಾಂಕಿನಲ್ಲಿ ಜಮಾ ಇರುತ್ತದೆ. ರುದ್ರಪಶುಪತಿ ತಪ್ಪಾಗಿ ರಾಚೋಟೇಶ್ವರ ಎಂದು ಹಣ ಬಂದಿರುತ್ತದೆ. ಸರ್ಕಾರದವರು ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿ ದೇವಸ್ಥಾನ ಯಾವುದು ಎಂದು ಬರೆದುಕೊಳ್ಳುತ್ತಾರೆ ಎಂದರೆ ಸಾಕ್ಷಿಯು ತಪ್ಪಾಗಿ ನಮೂದು ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಶಿವಾನಂದ ಶೀಲವಂತ, ಈರಸಂಗಪ್ಪ ದಾನಪ್ಪ ಸೇಖದಾಳ ರವರು ತಪ್ಪಾಗಿ ನಮೂದು ಆದ ಕಾರಣ ಸದರಿಯವರು ಅರ್ಜಿ ಸಲ್ಲಿಸಿರುತ್ತಾರೆ. ಅಂದಾಜು 25 ವರ್ಷಗಳ ಹಿಂದೆ ಅರ್ಜಿ ಸಲ್ಲಿಸಿರುತ್ತಾರೆ.

3. ವಾದಿಯ ಪೂರ್ವದಲ್ಲಿ ಇರುವ ಜಾಗಕ್ಕೆ ಹಕ್ಕು ಪತ್ರ ನೀಡಿದ್ದು, ತಪ್ಪಾಗಿ ನಮೂದು ಆದ ಕಾರಣ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ಡಿ-76 ಇರುವಾಗಲೆ ಅರ್ಜಿ ಸಲ್ಲಿಸಿರುತ್ತಾರೆ. ಡಿ-76 ಸವಳು-ಜವಳು ಜಾಗ ಇರುವ ಕಾರಣ 4 ಗುಂಟೆ ಜಾಗ ಕೊಟ್ಟಿರುತ್ತಾರೆ ಎಂದು ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ. ವಾದಿಯ ಜಾಗದ ಪಕ್ಕದಲ್ಲಿ ಇರುವ ಜಾಗಕ್ಕೆ ರಾಚೋಟೇಶ್ವರ

ದೇವಸ್ಥಾನದಿಂದ ಹಕ್ಕು ಪತ್ರ ನೀಡಿದ್ದು ತಪ್ಪಾಗಿರುತ್ತದೆ ಎಂದು ರುದ್ರಪಶುಪತಿ ಮಠ ಎಂದು ನೀಡಬೇಕೆಂದು ಶೇಖದಾರ ಹಾಗೂ ಪಂತಗಿ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ.

4. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿದ್ದು ಸದರಿ ದಾಖಲಾತಿ O.S.No.334/2001 ರಲ್ಲಿ ನೀಡಿದ ಸಾಕ್ಷಿ ಪ್ರಮಾಣ ಪತ್ರವಾಗಿರುತ್ತದೆ ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನ ತಂದೆ 1ನೇ ಪ್ರತಿವಾದಿ ಆಗಿರುತ್ತಾರೆ ಎಂದರೆ ಸರಿ. ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿ-6 ಎಂದು ಗುರುತಿಸಲಾಯಿತು. ಸದರಿ ದಾವೆಯಲ್ಲಿ ನ್ಯಾಸದ ಅಧಿನಿಯಮದ ಅಡಿಯಲ್ಲಿ ದಾಖಲಾತಿ ಹಾಜರಪಡಿಸಿರುತ್ತಾರೆ ಎಂದರೆ ಸರಿ. ಸದರಿ ದಾಖಲಾತಿಯನ್ನು ಈಗಾಗಲೆ ನಿಪಿ-12 ಎಂದು ಗುರುತಿಸಲಾಗಿರುತ್ತದೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ನೀಡಿ ಮುಂದುಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ಶ್ರೀ ಅಮಿತ್ ಘಟ್ಟಿ)**
**ದಿವಾಣಿ ನ್ಯಾಯಾಧೀಶರು ಮತ್ತು**
**ನ್ಯಾಯಿಕ ದಂಡಾಧಿಕಾರಿಗಳು**
**ಬಸವನ ಬಾಗೇವಾಡಿ.**